ಸಿ.ಸಿ ನಂಬ್ರಃ 1194/2023
ಪಿ.ಡಬ್ಲ್ಯೂ : 1

ದಿನಾಂಕಃ 09-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಎನ್ ಎಚ್.  ವಕೀಲರಿಂದ

1. ನಾನು ಸೊಸೈಟಿಯಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದೇನೆ. 8 ರಿಂದ 8.5 ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನಮ್ಮ ಸಂಸ್ಥೆ ಸೌಹಾರ್ದ ಪೆಡೆರೆಶನ್ ಅಡಿ ನೋಂದಾವಣೆ ಆಗಿರುತ್ತದೆ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುತ್ತೇನೆ. ಸಾಲದ ಅರ್ಜಿಯನ್ನು ಜಯಾ ಎಂಬುವವರು ಹಾಕಿದ್ದರು. ಆರೋಪಿತ ಆ ಸಾಲಕ್ಕೆ ಶ್ಯೂರಿಟಿ ಇರುತ್ತಾರೆ. ನಾನು ಸಾಲದ ಅರ್ಜಿಯನ್ನು ಮುಖ್ಯ ಕಚೇರಿಗೆ ಕಳುಹಿಸಿದ್ದು, ಅಲ್ಲಿ ಮಂಜೂರಾತಿ  ಆಗಿರುತ್ತದೆ.

2. ಮುಖ್ಯ ವಕಚೇರಿಯಲ್ಲಿ ನಿರ್ದೇಶಕರ ಒಪ್ಪಿ ಗೆ ತೆಗೆದುಕೊಂಡು ಮಂಜೂರಾಗಿರುತ್ತದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 14-07-2017 ರಲ್ಲಿ ಸಾಲ ಮಂಜೂರಾತಿ ಆಗಿರುತ್ತದೆ. ಸಾಲದ ಹಣವನ್ನು ಜಯಾರವರ ಖಾತೆಗೆ ವರ್ಗಾವಣೆ ಮಾಡಿರುತ್ತೇವೆ. ಆರೋಪಿತನ ಖಾತೆಗೆ ಹಣ ವರ್ಗಾವಣೆ  ಮಾಡಿರುವುದಿಲ್ಲ. 1.5 ಲಕ್ಷವನ್ನು ಜಯಾರವರ ಖಾತೆಗೆ ವರ್ಗಾವಣೆ ಮಾಡಲಾಗಿರುತ್ತದೆ. 1 ಲಕ್ಷ 50 ಸಾವಿರ ರೂ ಸಾಲ ಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. LIC ಸರೆಂಡರ್ ವ್ಯಾಲ್ಯೂ ಹಾಗೂ ಪಿಗ್ಮಿ ಮೇಲೆ, ಜಮೀನು ಅಡಮಾನದ ಸಾಲ, ಮನೆ ಸಾಲ, ವಾಹನ ಸಾಲ ಕೊಡುತ್ತೇವೆ.

3. ಜಯರವರಿಗೆ ವ್ಯವಹಾರದ ಸಾಲ ಕೊಟ್ಟಿರುತ್ತೇವೆ. ಪಿಶಿಂಗ್ ಬ್ಯುಸಿನೆಸ್ ದಾಖಲೆ ಪಡೆದಿರುತ್ತೇವೆ. ಆ ದಾಖಲೆ ಸಾಲಗಾರರ ಹೆಸರಿನಲ್ಲಿ ಇತ್ತು. ಒಟ್ಟು 2 ಜಾಮೀನು ತೆಗೆದುಕೊಂಡಿರುತ್ತೇವೆ. ಜಯಾರವರು ಸಾಲ ಮಾಡುವ 2 -3 ತಿಂಗಳ ಮುಂಚೆ ಮಾತ್ರ ಕಚೇರಿಗೆ ಬಂದಿದ್ದರು. ಆರೋಪಿತರನು ಸಾಲ ಮರಪಾವತಿಸಿರುವುದಿಲ್ಲ. ಜಯಾರವರು ಸಹ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ. 16 ಪರ್ಸೆಂಟ್ ಬಡ್ಡಿಗೆ ಸಾಲ ನೀಡಲಾಗಿರುತ್ತದೆ.

4. ಆರೋಪಿಯಿಂದ ಶ್ಯೂರಿಟಿಗಾಗಿ LIC ಬಾಂಡ್ ತೆಗೆದುಕೊಂಡಿರುತ್ತೇವೆ. ಅದನ್ನು ಸಾಲದ ಹಣ ಬಾಕಿ ಉಳಿಸಿದ್ದರಿಂದ ಅದನ್ನು ಬಡ್ಡಿಗೆ ಜಮಾ ಮಾಡಿಕೊಂಡಿರುತ್ತೇವೆ.  LIC ಬಾಂಡ್ ನ್ನು ತೆಗೆದುಕೊಂಡ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇವೆ. ಆರೋಪಿತ ಯಾವುದೇ

ಸಾಲವನ್ನು ಪಡೆದುಕೊಳ್ಳದೇ ಇದ್ದರೂ ಸಹ ಆತನಿಂದ ಚೆಕ್ ಪಡೆದಿರುತ್ತೇವೆ ಎಂದರೆ ಸಾಕ್ಷಿ ಆತನೆ ಚೆಕ್ ನ್ನು ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. 1,71,300/- ರೂಪಾಯಿಗೆ ಚೆಕ್ ನ್ನು ಆರೋಪಿತ ನೀಡಿರುತ್ತಾನೆ. ಚೆಕ್ ನ್ನು ಆತನೆ ಬರೆದುಕೊಟ್ಟಿರುತ್ತಾನೆ. ಆರೋಪಿತ ಎಷ್ಟು ಓದಿರುತ್ತಾರೆ ಎಂದು ಗೊತ್ತಿಲ್ಲ. ಆರೋಪಿತ ಲಾರಿ ಟ್ರಾನ್ಸಪೋರ್ಟ್ ವ್ಯವಹಾರ ಮಾಡುತ್ತಾನೆ. ಆರೋಪಿತ ಯಲ್ಲಾಪುರದಲ್ಲಿ ವಾಸವಾಗಿರುತ್ತಾನೆ.

ಈ ಸಂದರ್ಭದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ